## ವಾರ್ತಾ ವಿಶ್ಲೇಷಣೆ

**ಭಯದ ಉತ್ಪಾದನೆ** : ಎರಿಕ್ ಫ್ರಾಮ್ ಎಂಬ ಮಹಾನ್ ಮನೋವಿಜ್ಞಾನಿ 'Escape from Freedom' ಎಂಬ ಪುಸ್ತಕವನ್ನು ಬರೆದಿದ್ದಾರೆ. ಜನರು ಯಾವುದೋ ಒಂದು ಕಟ್ಟುಪಾಡಿನ ಆಳ್ವಿಕೆಯಲ್ಲಿ, ಭಯದ ಅಡಿಯಲ್ಲಿ ಇರಲು ಬಯಸುತ್ತಾರೆ. ಅವರಿಗೆ ನೀಡಲಾಗಿರುವ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು ಜೀವನ ನಡೆಸುವ ಸಾಮರ್ಥ್ಯ ಅವರಿಗಿರುವುದಿಲ್ಲ. ಸ್ವಾತಂತ್ರ್ಯವು ಜವಾಬ್ದಾರಿಯನ್ನು ವ್ಯಕ್ತಿಯೊಬ್ಬನ ಮೇಲೆ ಹೇರುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ನಿರಂಕುಶ ಅಧಿಕಾರದ ಕಪಿಮುಷ್ಟಿಗೆ ಸಿಕ್ಕಿಹಾಕಿಕೊಳ್ಳಲೂ ಜನ ಹೇಸುವುದಿಲ್ಲ. ಆದ್ದರಿಂದ ಮುಕ್ತ ಮತ್ತು ಸ್ವತಂತ್ರ ಜೀವನವನ್ನು ನಡೆಸಲು ಜನರು ಮಾನಸಿಕವಾಗಿ ಪ್ರಬುದ್ಧರಾಗಿರಬೇಕು. ಇದು ಎರಿಕ್ ಫ್ರಾಮ್ ಅವರ ಪ್ರತಿಪಾದನೆ.

ಜನರಲ್ಲಿ ಭಯವನ್ನು ಹುಟ್ಟಿಸುವುದು ಮತ್ತು ಭಾರತದಲ್ಲಿ ಇರುವ ಮುಕ್ತ ಮತ್ತು ಸ್ವತಂತ್ರ ವಾತಾವರಣಕ್ಕೆ ಧಕ್ಕೆ ತರುವುದು – ಇದೇ ಬೆಂಗಳೂರು ಮತ್ತು ಅಹಮದಾಬಾದುಗಳಲ್ಲಿ ಸಿಡಿದ ಬಾಂಬುಗಳ ಉದ್ದೇಶ. ವ್ಯಕ್ತಿಗಳ ಮನಸ್ಸಿನಲ್ಲಿ ಮೂಡುವ ಅಭದ್ರತೆಯು ನಾಡಿನ ಅಭದ್ರತೆಗೆ ಕಾರಣವಾಗುತ್ತದೆ. ಅಂತಹ ವಾತಾವರಣವನ್ನು ದೇಶದಾದ್ಯಂತ ಉಂಟುಮಾಡುವುದೇ ಈ ಬಾಂಬುಗಳನ್ನು ಸಿಡಿಸಿದ ಉಗ್ರಗಾಮಿಗಳ ಉದ್ದೇಶ.

ಈ ದುಷ್ಕರ್ಮಗಳ ಹಿಂದೆ ದುಷ್ಟಬುದ್ಧಿಗಳು ಕಾರ್ಯ ಮಾಡುತ್ತಿವೆ ಎನ್ನುವುದನ್ನು ಮರೆಯಬಾರದು. ಆ ದುಷ್ಟಬುದ್ಧಿಗಳ ಉಗಮವಾಗುವುದು ದುಷ್ಟ ಸಿದ್ಧಾಂತದಿಂದ. ಇತ್ತೀಚಿಗೆ ಅತ್ಯಂತ ಸುಶಿಕ್ಷಿತ ಮತ್ತು ಉನ್ನತ ಉದ್ಯೋಗಗಳಲ್ಲಿರುವ ಯುವಕರು ಕೂಡ ಈ ಬಗೆಯ ಸಿದ್ಧಾಂತಗಳಿಗೆ ಒಲವು ತೋರಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಇವು ಅವರ ವಿವೇಕವನ್ನು ನಷ್ಟ ಮಾಡುತ್ತವೆ; ದ್ವೇಷ, ಭಯ, ಸಂದೇಹ ಮತ್ತು ಅಭದ್ರತೆಯ ಭಾವನೆಗಳನ್ನು ಹುಟ್ಟು ಹಾಕಿ ದುಷ್ಕರ್ಮಗಳನ್ನು ಎಸಗುವಂತೆ ಮಾಡುತ್ತವೆ. ಆದ್ದರಿಂದ ಉಗ್ರವಾದದ ವಿರುದ್ಧದ ಸಮರ ಮೂಲಭೂತವಾಗಿ ಸೈದ್ಧಾಂತಿಕ ನೆಲೆಯಲ್ಲಿ ನಡೆಯಬೇಕು. ಅದಕ್ಕೆ ಪ್ರಚೋದನೆ ನೀಡುವ ಸಿದ್ಧಾಂತಗಳು ನಮ್ಮ ಯುವಜನರ ತಲೆ ಕೆಡಿಸದಂತೆ ನೋಡಿಕೊಳ್ಳಬೇಕು. ಅದಿಲ್ಲದೆ ಬರಿಯ ಪೋಲೀಸ್ ದಳದಿಂದ ಮಾತ್ರವೇ ಇಂತಹ ದುಷ್ಕರ್ಮಗಳನ್ನು ತಡೆಯಲು ಅಸಾಧ್ಯ.

**ಆಂಗ್ಲ ಅಧಿಕಾರಿಯ ಆರಾಧನೆ!**: ಬ್ರಿಟಿಷರ ಆಳ್ವಿಕೆಯ ಸಮಯ. ಥಾಮಸ್ ಮುನ್ರೋ ಎಂಬುವವನು ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದನು. ಅವನು ಕಡಪಾ ನಗರದ ಸಮೀಪದಲ್ಲಿರುವ ಬೆಟ್ಟಗುಡ್ಡಗಳ ದಾರಿಯಲ್ಲಿ ಬರುತ್ತಿದ್ದಾಗ, ಎರಡು ಬೆಟ್ಟಗಳ ಶಿಖರಗಳನ್ನು ಒಂದು ಚಿನ್ನದ ಹಗ್ಗದಿಂದ ಕಟ್ಟಿಹಾಕಿದಂತೆ ಕಂಡನು. ತನ್ನ ಕುದುರೆಯನ್ನು ನಿಲ್ಲಿಸಿದ ಮುನ್ರೋ, ತನ್ನ ಸಂಗಡಿಗರ ಕಡೆ ವಿಸ್ಮಯದಿಂದ ನೋಡಿದನು. ಆದರೆ, ಅವನು ಕಂಡ ಅದ್ಭುತ ದೃಶ್ಯವನ್ನು ಅವರು ಯಾರೂ ಕಂಡಿರಲಿಲ್ಲ. ಎರಡು ಶಿಖರಗಳ ನಡುವೆ ನೇತಾಡುತ್ತಿದ್ದ ಚಿನ್ನದ ಹಗ್ಗ ಅದಾವುದು?

ಇದನ್ನು ತಿಳಿಯಲು ನಾವು ರಾಮಾಯಣದ ಕಾಲಕ್ಕೆ ಹೋಗಬೇಕು. ರಾವಣನನ್ನು ಜಯಿಸಿ, ಅಯೋಧ್ಯೆಗೆ ಮರಳಿ ಬರುತ್ತಿದ್ದ ಶ್ರೀರಾಮಸೀತೆಯರು ಮಾರ್ಗಮಧ್ಯದಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು, ಒಂದು ಸೂಕ್ತವಾದ ಸ್ಥಳವನ್ನು ಹನುಮಂತನು ಹುಡುಕುತ್ತಿದ್ದನಂತೆ. ಕಡಪಾದ ಹತ್ತಿರದ ಒಂದು ಗುಹೆಯನ್ನು ಅದಕ್ಕೆ ಆಯ್ಕೆ ಮಾಡಿ, ಅದರ ಗುರುತಿಗಾಗಿ ಚಿನ್ನದ ಹಗ್ಗವನ್ನು ಎರಡು ಶಿಖರಗಳ ನಡುವೆ ತೂಗುಹಾಕಿದನಂತೆ. ಆತನ ಸೇವೆಯನ್ನು ಪ್ರಶಂಸಿಸಿದ ರಾಮನು ಆ ಗುಹೆಯ ಗೋಡೆಯ ಮೇಲೆ ಹನುಮನ ಚಿತ್ರವನ್ನು ಕೊರೆದನಂತೆ. ಹನುಮಂತನು ತೂಗು ಹಾಕಿದ್ದ ಚಿನ್ನದ ಹಗ್ಗವನ್ನೇ ಥಾಮಸ್ ಮುನ್ರೋ ಕಂಡದ್ದು ಎಂದು ಭಕ್ತರ ನಂಬಿಕೆ. ಇದನ್ನು ಅವನು ತನ್ನ ದಿನಚರಿಯಲ್ಲಿ ಬರೆದಿದ್ದಾನೆ ಕೂಡ. ಆದರೆ ಅವನು ಅದನ್ನು ಒಂದು ಮೂಢನಂಬಿಕೆ ಎಂದೇ ಪರಿಗಣಿಸಿದ್ದನು.

ಏನೇ ಇರಲಿ, ರಾಮನು ವಿಶ್ರಾಮ ಪಡೆದ ಜಾಗದಲ್ಲಿ ಈಗ ಒಂದು ದೇವಾಲಯವಿದೆ. ಅಲ್ಲಿ ಕಲ್ಲಿನ ಗೋಡೆಯಲ್ಲಿ ಕೊರೆದ ಹನುಮಂತನ ಚಿತ್ರಕ್ಕೆ ಪೂಜೆ ಸಲ್ಲುತ್ತಿದೆ. ಪಕ್ಕದಲ್ಲಿಯೇ ಶ್ರೀರಾಮ ಸೀತೆಯರ ಚಿತ್ರಪಟವಿದೆ. ಅದಕ್ಕೂ ಪೂಜೆ ಸಲ್ಲುತ್ತಿದೆ. ವಿಚಿತ್ರವೋ ಎಂಬಂತೆ ಅದರ ಪಕ್ಕದಲ್ಲಿಯೇ ಭಕ್ತ ಥಾಮಸ್ ಮುನ್ರೋವಿನ ಚಿತ್ರವೂ ಇದೆ. ಅದಕ್ಕೂ ಕುಂಕುಮ ಅರಿಷಿನ ಮತ್ತು ಹೂವುಗಳಿಂದ ಪೂಜೆ ಸಲ್ಲುತ್ತಿದೆ! ಭಕ್ತರ ನಡುವೆ ಜಾತಿಭೇದವಿಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅದಕ್ಕೊಂದು ಸುಂದರ ನಿದರ್ಶನ. ಈಗಲೂ ಹಿಂದೂ ದೇವಾಲಯವೊಂದರಲ್ಲಿ ನಡೆಯುತ್ತಿರುವ ಆಂಗ್ಲ ಅಧಿಕಾರಿಯ ಆರಾಧನೆ! (**'ದಿ ಹಿಂದೂ'**, ಆಗಸ್ಟ್ ೩, ೨೦೦೮)

**ಹಿಂದೂ–ಯಹೂದಿಗಳ ನಡುವೆ ಸಂವಾದ:** ಹಿಂದೂ ಮತ್ತು ಯಹೂದಿ ಧರ್ಮಗಳು ಜಗತ್ತಿನ ಅತ್ಯಂತ ಪುರಾತನ ಧರ್ಮಗಳು. ಸಾವಿರಾರು ಶತಮಾನಗಳ ಕಾಲದ ಹೊಡೆತಕ್ಕೆ ಸಿಕ್ಕಿಯೂ ಇಂದಿಗೂ ಜೀವಂತವಾಗಿರುವ ಈ ಎರಡು ಧಾರ್ಮಿಕ ಸಂಪ್ರದಾಯಗಳ ನಡುವೆ ಅನ್ಯೋನ್ಯ ಮಾತುಕತೆಯ ಹೊಸಯುಗವೊಂದು ಆರಂಭವಾಗಿದೆ. ಮೊದಲ ಸಮಾವೇಶ ನವದೆಹಲಿಯಲ್ಲಿ ಫೆಬ್ರವರಿ ೨೦೦೭ ರಂದು ಜರುಗಿತು. ಎರಡನೆಯ ಸಮಾವೇಶ ಇಸ್ರೇಲಿನ ಜೆರುಸಲೆಮ್‌ನಲ್ಲಿ, ಕಳೆದ ಫೆಬ್ರವರಿ ತಿಂಗಳ ೧೭ ರಿಂದ ೨೦ ನೆಯ ತಾರೀಖಿನವರೆಗೆ ನಡೆಯಿತು. ಎರಡೂ ಧರ್ಮಗಳಲ್ಲಿರುವ ಸಮಾನ ಅಂಶಗಳನ್ನು ಕಂಡುಕೊಳ್ಳುವುದರಲ್ಲಿ ಈ ಸಮಾವೇಶಗಳು ಯಶಸ್ವಿಯಾಗಿವೆ ಎಂದು ಆಯೋಜಕರು ಹೇಳಿಕೊಳ್ಳುತ್ತಾರೆ. ಮತಾಂತರ ವಿರೋಧಿಗಳಾದ ಈ ಎರಡೂ ಧರ್ಮಗಳ ನಡುವಿನ ಸಹಕಾರದಿಂದ, ಧಾರ್ಮಿಕ ಸಾಮರಸ್ಯ ಉಂಟಾಗುವುದೇ? (**'ಹಿಂದೂಯಿಸಮ್ ಟುಡೇ'**, ಜುಲೈ ೨೦೦೮)

### ಆಶ್ರಮದ ಕಾರ್ಯಕ್ರಮಗಳು

### ಸೆಪ್ಟೆಂಬರ್ 2008

| | | |
|---|---|---|
| 03 | ಬುಧವಾರ | ಗಣೇಶ ಚತುರ್ಥಿ |
| 11 | ಗುರುವಾರ | ಏಕಾದಶಿ |
| 23 | ಮಂಗಳವಾರ | ಸ್ವಾಮಿ ಅಭೇದಾನಂದ ಜಯಂತಿ |
| 25 | ಗುರುವಾರ | ಏಕಾದಶಿ |
| 29 | ಸೋಮವಾರ | ಸ್ವಾಮಿ ಅಖಂಡಾನಂದ ಜಯಂತಿ |